Coverage Report: TCS IT Wiz – Bengaluru Edition

| | | | |
|---|---|---|---|
| Published Date: | 4 Aug 2017 | Publication: | Vishwavani |
| Edition: | Bangalore | Page No: | 2 |

# ಪಿಎಸ್‌ಬಿಬಿಎಲ್‌ಎಲ್‌ಎ ಶಾಲೆಗೆ ಟಿಸಿಎಸ್ ಐಟಿ ವಿಜ್ ಪ್ರಶಸ್ತಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಐಟಿ ಸೇವಾ ಸಂಸ್ಥೆ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ವೈಯಾಲಿಕಾವಲ್‌ನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಆಯೋಜಿಸಿದ್ದ ಟಿಸಿಎಸ್ ಐಟಿ ವಿಜ್‌ನಲ್ಲಿ ಪಿಎಸ್‌ಬಿಬಿಎಲ್ ಎಲ್‌ಎ ಶಾಲೆಯ ವಿದ್ಯಾರ್ಥಿಗಳು ವಿಜೇತರಾಗಿದ್ದಾರೆ.

8 ರಿಂದ 12 ನೇ ತರಗತಿ ಓದುತ್ತಿರುವ ಸುಮಾರು 1,150 ವಿದ್ಯಾರ್ಥಿಗಳು ಟಿಸಿಎಸ್ ಐಟಿ ವಿಜ್‌ನಲ್ಲಿ ಪಾಲ್ಗೊಂಡಿದ್ದರು. ಪ್ರತಿ ಸಂಸ್ಥೆಯ 10 ತಂಡಗಳು (ಇಬ್ಬರನ್ನು ಒಳಗೊಂಡ ಒಂದು ತಂಡ) ಪಾಲ್ಗೊಂಡಿದ್ದವು. ಆಟೋಮೇಶನ್, ಕಾಂಟೆಕ್ಸುವಲ್ ನಾಲೆಜ್, ಮಶಿನ್ ಲರ್ನಿಂಗ್ ಮತ್ತು ಏಜೈಲ್ ಎಂಬ ನಾಲ್ಕು ವಿಷಯಗಳ ಮೇಲೆ ನಡೆಯಿತು. ಸ್ಪರ್ಧಿಸಿದ್ದ ವಿದ್ಯಾರ್ಥಿಗಳ ತಂಡಗಳ ಪೈಕಿ ಮೊದಲ ಆರು ತಂಡಗಳು ಪ್ರಾದೇಶಿಕ ಫೈನಲ್‌ನಲ್ಲಿ ಸ್ಪರ್ಧಿಸಲು ಅರ್ಹತೆ ಪಡೆದವು.




ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಏರ್ಪಡಿಸಿದ್ದ ಟಿ ಕ್ವಿಜ್‌ನ ಪ್ರಾದೇಶಿಕ ಫೈನಲ್ಸ್‌ನಲ್ಲಿ ವಿಜೇತರಾದ ಪಿಎಸ್ ಬಿಬಿಎಲ್‌ಎಲ್‌ಎ ಶಾಲೆಯ ವಿದ್ಯಾರ್ಥಿಗಳಾದ ಆರ್ಯನ್ ಪಟೇಲ್ ಮತ್ತು ಪ್ರಣವ್ ಪ್ರಭು ಅವರಿಗೆ 60 ಸಾವಿರ ರು.ಗಳ ಗಿಫ್ಟ್ ವೋಚರ್‌ನ ಬಹುಮಾನ ನೀಡಲಾಯಿತು.

5 ಸುತ್ತುಗಳ ನಂತರ ಪ್ರಾದೇಶಿಕ ಫೈನಲ್ಸ್‌ನಲ್ಲಿ ಪಿಎಸ್‌ಬಿಬಿಎಲ್‌ಎಲ್‌ಎ ಶಾಲೆಯ ವಿದ್ಯಾರ್ಥಿಗಳಾದ ಆರ್ಯನ್ ಪಟೇಲ್ ಮತ್ತು ಪ್ರಣವ್ ಪ್ರಭು ಅವರು ಪ್ರಶಸ್ತಿ ವಿಜೇತರಾದರು. ಪ್ರಾದೇಶಿಕ ಫೈನಲ್‌ನಲ್ಲಿ ವಿಜೇತ ವಿದ್ಯಾರ್ಥಿಗಳಿಗೆ 60 ಸಾವಿರ ರು.ಗಳ ಗಿಫ್ಟ್ ವೋಚರ್‌ನ ಬಹುಮಾನ ನೀಡಲಾಯಿತು. ದ್ವಿತೀಯ ಸ್ಥಾನ ಪಡೆದ ಇಂದಿರಾನಗರದ ಎನ್‌ಪಿಎಸ್ ಶಾಲೆಯ ವಿದ್ಯಾರ್ಥಿಗಳಾದ ಮುಕ್ತಾಜೋಶಿಪುರ ಮತ್ತು ರೋಹನ್ ಕಪೂರ್ ಅವರಿಗೆ 40 ಸಾವಿರ ರು.ಗಳ ಗಿಫ್ಟ್ ವೋಚರ್ ಹಾಗೂ ಟ್ರೋಫಿ ಮತ್ತು ಪದಕಗಳನ್ನು ನೀಡಲಾಯಿತು.

ಪ್ರಾದೇಶಿಕ ಮಟ್ಟದಲ್ಲಿ ಚಾಂಪಿಯನ್ ಆದ ವಿದ್ಯಾರ್ಥಿಗಳ ಜತೆಗೆ ಪೋಷಕರು ಅಥವಾ ಶಿಕ್ಷಕರು ಮುಂಬೈನಲ್ಲಿ ನಡೆಯಲಿರುವರಾಷ್ಟ್ರೀಯ ಫೈನಲ್‌ಗೆ ತೆರಳಲು ಅವಕಾಶವಿದೆ. ರಾಜ್ಯ ಸರಕಾರದ ನಿವೃತ್ತ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಕೆ.ಜೈರಾಜ್, ಎಡಿಜಿಪಿ ಭಾಸ್ಕರ್‌ರಾವ್ ಹಾಗೂ ಟಿಸಿಎಸ್ ಬೆಂಗಳೂರಿನ ಮುಖ್ಯಸ್ಥ ನಾಗರಾಜ ಇಜಾರಿ ಅವರು ವಿಜೇತರರಿಗೆ ಬಹುಮಾನ ವಿತರಿಸಿದರು.